ತಾರೀಖು 14ನೆ ಫೆಬ್ರವರಿ 1907.

ನಂ. 7018—ಸ್ಯಾನಿಟೆರಿ (21-06)-86, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :— ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ಸಂತೆ ಮಹ್ತು ಉತ್ಸವಕ್ಕೆ ಯಾತ್ರೆ ಹೋಗುವುದನ್ನು ನಿಷೇಧಿಸಿರುತ್ತಾರೆ.

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟ್	ತಾರೀಖು. ಇಂದ.	ತಾರೀಖು. ಗೆ.	ಅಧಿಕಾರ.
ಚೂಡನಾಥಸ್ವಾಮಿ ರಥೋತ್ಸವ.	ಚೂಡವಾಡಿ.	ಹೊಸೂರು.	ಸೇಲಂ	26—2—07 (ಉಭಯ ದಿನಗಳೂ ಸೇರಿ)	5—3—07	ಫರ್ಸ್ಟ್ ಅಸಿಸ್ಟೆಂಟ್ ರೆಸಿಡೆಂಟ್ ರವರ 1907ನೆ ಇಸವಿ ಫೆಬ್ರವರಿ 6ನೆ ಮತ್ತು 93ನೆ ನಂಬರ್ ಮೆಮೋ ಪ್ರಕಾರ.

ತಾರೀಖು 18ನೆ ಫೆಬ್ರವರಿ 1907.

ನಂ. 7188—ಸ್ಯಾನಿಟೆರಿ 170-06-2, ಮೈಸೂರು ಡಿಸ್ಟ್ರಿಕ್ಟ್ ನಾಗಮಂಗಲ ತಾಲ್ಲೂಕಿನ ಚುಂಚನಗಿರಿ ಗ್ರಾಮಕ್ಕೆ ಶ್ರೀಗಂಗಾಧರೇಶ್ವರ ಸ್ವಾಮಿಯವರ ಜಾತ್ರೆ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ, ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ಸು ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಫೆಬ್ರವರಿ 24ನೆ ತಾರೀಖಿನಿಂದ 1907ನೆ ಮಾರ್ಚಿ 4ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 20ನೆ ಫೆಬ್ರವರಿ 1907.

ನಂ. 7209—ಸ್ಯಾ. 150-06-4, ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಸ್ಥಳಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬಂದೊಂದರ ಪಕ್ಕದಲ್ಲಿಯೂ ನಮೂದಿಸಿರುವ ಜಾತ್ರೆ ಮೊದಲಾದ ಕಾಲಗಳಲ್ಲಿ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಆ ಸ್ಥಳಗಳಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ :—

	ಜಾತ್ರೆಯ ಹೆಸರು.	ನಡೆಯುವ ಸ್ಥಳ.	ತಾಲ್ಲೂಕು.	ತಾರೀಖು ಇಂದ	ತಾರೀಖು ಗೆ
1.	ಶ್ರೀ ನರಸಿಂಹಸ್ವಾಮಿಯವರ ಜಾತ್ರೆ.	ಸುಗ್ಗನಹಳ್ಳಿ	ಮಾಗಡಿ	28—2—07	6—3—07
2.	ಶ್ರೀ ರಂಗನಾಥಸ್ವಾಮಿಯವರ ಜಾತ್ರೆ.	ತಿರುಮಲೆ	ಡಿಟೋ	29—3—07	6—4—07

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ಸು ಎಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಶ್ರೀಮನ್ ಮಹಾರಾಜರವರ ಸರ್ಕಾರದವರು ಪ್ರತಿ ಒಂದು ಜಾತ್ರೆಯ ಪಕ್ಕದಲ್ಲಿಯೂ ನಮೂದಿಸಿರುವ ತಾರೀಖುಗಳಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಆ ಜಾತ್ರೆಯ ಸ್ಥಳಕ್ಕೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗಳಿಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 20ನೆ ಫೆಬ್ರವರಿ 1907.

ನಂ. 7211—ಸ್ಯಾನಿಟೆರಿ 139-06—10, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ಸ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್

9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನ್ನು ಮೆಗಳಿಂದನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗುತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ	ತಾಲ್ಲೂಕು
ಅನ್ನಸಂದ್ರ	ಬೆಂಗಳೂರು.
ನಡುನನಪಾಳ್ಯ	ಡಿಟೋ
ದೊಡ್ಡಕನ್ನೆಲ್ಲಿ	ಡಿಟೋ
ವಾಲೆಪುರ	ಡಿಟೋ
ಕೋರಮಂಗಲ	ಡಿಟೋ
ಬೆಳೂರು	ಡಿಟೋ
ಬಿದರಗೆರೆ	ಆನೇಕಲ್ಲು.
ತ್ಯಾನಕನಹಳ್ಳಿ	ಡಿಟೋ
ಇಂಡ್ಲೆಬೆಲೆ	ಡಿಟೋ
ಅರಹಳ್ಳಿ	ಡಿಟೋ
ಜಿಗಣಿ	ಡಿಟೋ
ಕರಕೋಲ್‌ಫಟ್ಟ	ಡಿಟೋ
ಕುತ್ತುಗೊಂಡಹಳ್ಳಿ	ಡಿಟೋ
ನರಸಾಪುರ	ಡಿಟೋ
ನೆಕ್ಕೊಂದಿದೊಮ್ಮಸಂದ್ರ	ಹೊಸಕೋಟೆ.
ಕುರುಡಸೊಂಣೇನಹಳ್ಳಿ	ಡಿಟೋ
ಚಿಕ್ಕನೆಕ್ಕೊಂಡಿ	ಡಿಟೋ
ಅಂಡೆನಹಳ್ಳಿ	ಡಿಟೋ
ಕುಕ್ಕುವಹಳ್ಳಿ	ದೊಡ್ಡಬಳ್ಳಾಪುರ.
ಬಂಗನಹಳ್ಳಿ	ಡಿಟೋ
ನಲ್ಲಪ್ಪನಹಳ್ಳಿ	ದೇವನಹಳ್ಳಿ.

ತಾರೀಖು 20ನೆ ಫೆಬ್ರವರಿ 1907.

ನಂ. 7224—ಸ್ಯಾನಿಟರಿ 170-06—4, ಮೈಸೂರು ಡಿಸ್ಟ್ರಿಕ್ಟ್ ಶ್ರೀರಂಗಪಟ್ಟಣ ತ್ತಾಲ್ಲೂಕಿನ ಕರೀಘಟ್ಟಕ್ಕೆ ಶ್ರೀ ಶ್ರೀನಿವಾಸಸ್ವಾಮಿಯವರ ರಥೋತ್ಸವ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮರ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮರ್ ಮಹಾರಾಜರವರ ಸರ್ಕಾರದವರು, 1907ನ ಮಾರ್ಚಿ 1ನೆ ತಾರೀಖಿನ ದಿನ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನ್ನು ಮೆಗೆ ವಿರೋಧವಾಗಿ ಮೇಲ್ಕಂಡ ರಥೋತ್ಸವಕ್ಕೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 16ನೆ ಫೆಬ್ರವರಿ 1907.

ನಂ. ಜೆ. 2434—ಕೋರಿಟ್ಸ್ 197-06—2, ಮೂರು ವಾರಗಳ ರಜಾವಿನಮೇಲೆ ಇರುವ ತಿಪಟೂರು ತಾಲ್ಲೂಕಿನ ಅಮಲ್ದಾರ್ ಮಿ॥ ಸಿ. ಗೋಪಾಲಾಚಾರ್ ಗೈರ್ ಹಾಜರಿಯಲ್ಲಿ ಸದರಿ ತಾಲ್ಲೂಕಿನ ಚಾರ್ಜಿನಲ್ಲಿ ಇಡಲ್ಪಟ್ಟಿರುವ ಸದರಿ ತಾಲ್ಲೂಕಿನ ಶಿರಸ್ತೆದಾರ್ ಪಿ. ಸಂಜೀವರಾಯರಿಗೆ ಅವರು ಆ ತಾಲ್ಲೂಕಿನ ಚಾರ್ಜಿನಲ್ಲಿರುವ ಪರ್ಯಂತರ ಚಲಾಯಿಸುವಂತೆ ಮೂರನೆ ತರಗತಿಯ ಮಾಜಿಸ್ಟ್ರೇಟನ ಅಧಿಕಾರಗಳನ್ನು ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 12ನೆ ಪ್ರಕರಣದ ಮೇರೆಗೆ ಕೊಟ್ಟಿದೆ.

ತಾರೀಖು 16ನೆ ಫೆಬ್ರವರಿ 1907.

ನಂ. ಜೆ. 2437—ಕೋರ್ಟ್ಸ್ 160-06—2, ಜಳ್ಳಕೆರೆ ತಾಲ್ಲೂಕಿನ ಆಕ್ಟಿಂಗ್ ಅಮಲ್ದಾರ್ ಮತ್ತು ಮೂರನೆ ತರಗತಿಯ ಮಾಜಿಸ್ಟ್ರೇಟಾದ ಮಿ॥ ಮಹಮ್ಮದ್ ಖೀರ್, ಬಿ. ಎ., ಯವರನ್ನು ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 12ನೆ ಪ್ರಕರಣದ ಮೇರೆಗೆ ಎರಡನೆ ತರಗತಿಯ ಮಾಜಿಸ್ಟ್ರೇಟಾಗಿ ಪೊಕರರ್ಮಾಡಿದೆ.

ತಾರೀಖು 16ನೆ ಫೆಬ್ರವರಿ 1907.

ನಂ. ಜೆ. 2439—ಕೋರ್ಟ್ಸ್ 160-06—3, ಹೊಸದುರ್ಗ ತಾಲ್ಲೂಕಿನ ಅಮಲ್ದಾರ್ ಮತ್ತು ಮೂರನೆ ತರಗತಿಯ ಮಾಜಿಸ್ಟ್ರೇಟಿಂದ ಮಿ॥ ಟಿ. ಕೆ. ಲಕ್ಷ್ಮಣ ಐಯರ್, ಬಿ. ಎ., ಯವರನ್ನು ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 12ನೆ ಪ್ರಕರಣದ ಮೇರೆಗೆ ಎರಡನೆ ತರಗತಿಯ ಮಾಜಿಸ್ಟ್ರೇಟಾಗಿ ಪೊಕರರ್ಮಾಡಿ ಇದೆ.

ತಾರೀಖು 18ನೆ ಫೆಬ್ರವರಿ 1907.

ನಂ. J. 2478—Pol. 136-06—2, ಸ್ಯ 1890ನೆ ಇಸವಿಯ 6ನೆ ನಂಬರ್ ಮೈಸೂರು ಅಪರಾಧಗಳ ರೆಗ್ಯುಲೇಷನಿನ 25ನೆ ಪ್ರಕರಣದ ಮೇರೆಗೆ, ಶ್ರೀಮರ್ ಮಹಾರಾಜರವರ ಸರ್ಕಾರದವರು ಚನ್ನಪಟ್ಟಣ ತಾಲ್ಲೂಕಿನ ಅಮಲ್ದಾರನ್ನು ಸದರಿ ರೆಗ್ಯುಲೇಷನಿನ 14ನೆ ಪ್ರಕರಣದ (e) ಕಲಮಿನ ಪ್ರಕಾರ ಶಿಕ್ಷಿಸಲ್ಪಡುವ ತಪ್ಪಿತಗಳಿಗಾಗಿ ವಿಚಾರಿಸಲ್ಪಟ್ಟ ನಡವಳಿಕೆಗಳನ್ನು ನಡೆಸುವಾಗ ಸಮಕ್ಷಮ ನಿಂತು ಹುಡುಕಿಸುವ ಅಧಿಕಾರವುಳ್ಳ ಆಫೀಸರನ್ನಾಗಿ ಸದರಿ ತಾಲ್ಲೂಕಿಗೆ ನೇಮಿಸಲು ಹುಕುಂ ಆಯಪಾಲಿಸಿರುತ್ತಾರೆ.

ತಾರೀಖು 19ನೆ ಫೆಬ್ರವರಿ 1907.

ನಂ. 7151—ಮ್ಯುನಿಸಿಪಲ್ 391-06—3, ಜಮೀರ್‌ದಾರ್ ಮಿ॥ ಸುಬ್ಬಾಭಟ್ಟರು ಛವತಿಯಾದ ಮಿ॥ ನಾರಾಯಣಭಟ್ಟರಿಗೆ ಬದಲಾಗಿ ಪಾವಗಡ ಟವ್ನ ಮ್ಯುನಿಸಿಪಲ್ ಬೋರ್ಡಿನ ಮೆಂಬರಾಗಿ ಪೊಕರರ್ಮಾಡಲ್ಪಟ್ಟಿರುತ್ತಾರೆ.